**ದಿನಾಂಕ 09/07/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

ಮುಂದುವರಿದ **ಪಾಟೀ ಸವಾಲುಃ** ಶ್ರೀ ಎಂ.ಎಲ್.ಡಿ **ವಕೀಲರಿಂದ**

ಬ್ಯಾಂಕಿನ ಹಿಂಬರಹ ನನಗೆ 20 ನೇ ತಾರೀಖಿನಂದು ಬಂದು 29 ಕ್ಕೆ ನಾನು ಆರೋಪಿಗೆನ ಮ್ಮ ವಕೀಲರ ಮುಖಾಂತರ ತಿಳುವಳಿಕೆ ಪತ್ರವನ್ನು ಕೊಡಿಸಿರುತ್ತೇನೆ . ಹಿಂಬರಹ ಬಂದ ನಂತರ ನಾನೇನು ಆರೋಪಿಯನ್ನು ಭೇಟಿಯಾಗಿ ಹಿಂಬರಹದ ಬಗ್ಗೆ ಆತನಿಗೆ ಹೇಳಲಿಲ್ಲ. ನಾನು ಹಿಂಬರಹ ಬಂದ ನಂತರ ಆರೋಪಿಯನ್ನು ಭೆಟಿಯಾಗದ ವಿಚಾರ ನನ್ನ ಫಿರ್ಯಾದಿನಲ್ಲಿ ನಮೂದು ಮಾಡಿಸಿಲ್ಲ. ಸಾಮಾನ್ಯವಾಗಿ ಯಾರೂ ಸಹ ಮೊದಲನೇ ಬಾರಿಗೆ ಭೇಟಿಯಾದ ನಂತರವೇ ಹಣದ ವ್ಯವಹಾರ ಮಾಡುವುದಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನಾನು ಮಡಿದ್ದೇನೆ ಎಂದು. ಯಾವುದೇ ವ್ಯಕ್ತಿಯ ಪೂರ್ವಾಪರ ತಿಳಿಯದೇ ಹಣದ ವ್ಯವಹಾರ ಮಾಡುವುದಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಮಂಜುನಾಥ ರವರಿಗೆ ನಗೆ ಆರೋಪಿಯ ಪರಿಚಯ ಇದ್ದ ಕಾರಣ ನಾನು ಮಾಡಿದ್ದೇನೆ ಎಂದು. ಆರೋಪಿಗೆ ಎಷ್ಟು ಸಂಬಳ ಬರುತ್ತದೋ ನಾನು ವ್ಯವಹಾರ ಮಾಡುವ ಮುನ್ನಾ ತಿಳಿದುಕೊಳ್ಳಲಿಲ್ಲ. ಆರೋಪಿಗೆ ಎಷ್ಟು ಸಂಬಳ ಬರುತ್ತದೋ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ದಾಖಲೆ ನಾನು ಪರಿಶೀಲನೆ ಮಾಡಲಿಲ್ಲ. ಸಾಧಾರಣವಾಗಿ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳು ವ್ಯವಸಾಯದ ಸಮಯ ಆಗಿರುತ್ತದೆ ಎಂದರೆ ಸರಿ. ಆ ಕಾಲಕ್ಕೆ ನನಗೆ ಹೊರಗಡೆ ಹೋಗಿ ಬರಲು ಕಷ್ಟ ಆಗುತ್ತದೆ ಎಂದರೆ ಸರಿಯಲ್ಲ. ಆರೋಪಿಗೆ ಸರ್ಕಾರದಿಂದ ಒಳ್ಳೆ ಸಂಬಳ ಬರುತ್ತಿದ್ದು ನನ್ನ ಬಳಿ ಸಾಲ ಮಾಡುವ ಯಾವುದೇ ದರದ್ದೇ ಆತನಿಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಫಾಯಿದೆ ಹೊಂದುವ ಸಲುವಾಗಿ ಸುಳ್ಳು ಫಿರ್ಯಾದೊಂದನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಯಾವುದೇ ಸಾಲ ಪಡೆಯದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಮಂಜುನಾಥರವರು ಶಾಮೀಲಾಗಿ

ಸುಳ್ಳು ಪ್ರಕರಣವೊಂದನ್ನು ಸೃಷ್ಟಿಸಿ ಅದಕ್ಕನುಗುಣವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ **10.08.2014** ರಂದು ನನ್ನನ್ನು ಭೇಟಿಯಾಗದೇ ಇದ್ದರೂ ಪ್ರಕರಣದಲ್ಲಿ ಸುಳ್ಳು ಅಂಶ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. **13.08.20147** ರಂದು ಆರೋಪಿ ನನ್ನಿಂದ ಯಾವುದೇ ಹಣ ಪಡೆಯದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಿಜವಾಗಿಯೂ ನಿಮ್ಮ ಬಳಿ ಹಣ ಪಡೆದಿದ್ದರೇ ಅದರ ಪೈಕಿ ನೀವು ದಾಖಲೆ ಹಾಜರುಪಡಿಸುತ್ತಿದ್ದು ಹಾಗೆ ಹಾಜರುಪಡಿಸದೇ ಇರುವುದರಿಂದ ನೀವು ಅವರಿಗೆ ಯಾವುದೇ ಹಣವನ್ನೇ ಕೊಟ್ಟಿಲ್ಲ ಎಂದು ಸೂಚಿಸಲು ಸಾಕ್ಷಿ ಸರಿಯಲ್ಲ ಎಂದು ಹೇಳುತ್ತಾರೆ. ಆರೋಪಿಯು ಖಾತೆಯ ಯಾವುದೇ ಚೆಕ್ಕನ್ನು ನನಗೆ ಕೊಡದೇ ಇದ್ದರೂ ನಾನೇ ಸುಳ್ಳು ಚೆಕ್ಕೊಂದನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**2.** ದಿಃ **13.08.2014** ರಂದು ಆರೋಪಿ ಸಂಜೆ **5** ಗಂಟೆಗೆ ರಾಜೇಶ್ ಟೀ ಹೋಟೆಲ್ ನಲ್ಲಿ ಸಿಕ್ಕಿದ್ದರು. **10.08.2014** ರಂದೂ ಅಲ್ಲಿಯೇ ಸಿಕ್ಕಿದ್ದರು. **13.08.2014** ರಂದು ರಾಜೇಶ್ ಟೀ ಅಂಗಡಿಯಲ್ಲಿ ಆರೋಪಿ ನಿಮಗೆ ಸಿಕ್ಕಿದ್ದಕ್ಕೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದಿರೇ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಚೆಕ್ಕನ್ನು ಹಾಜರುಪಡಿಸಿದ್ದೇನೆ ಎಂದು. ರಾಜೇಶ್ ಟೀ ಅಂಗಡಿಯಲ್ಲಿ ಆರೋಪಿ ನನಗೆ ಸಿಕ್ಕಿದ್ದ ಬಗ್ಗೆ ನನ್ನ ಫಿರ್ಯಾದಿನಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಆರೋಪಿ ನನ್ನನ್ನು ಭೇಟಿಯೂ ಆಗಿಲ್ಲ, ಯಾವುದೇ ಚೆಕ್ಕನ್ನೂ ಕೊಟ್ಟಿಲ್ಲ, ಹಣವನ್ನೂ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು, ಬ್ಯಾಂಕ್ ಮ್ಯಾನೇಜರ್ ಮತ್ತು ಮಂಜುನಾಥ ರವರು ಆರೋಪಿ ಖಾತೆಯಿಂದ ಚೆಕ್ ಕೊಟ್ಟಿರುವಂತೆ ದಾಖಲೆ ಸೃಷ್ಟಿಸಿ ಆರೋಪಿಯಿಂದ ಅಕ್ರಮ ಫಾಯಿದೆ ಹೊಂದಬೇಕೆಂಬ ದುರುದ್ದೇಶದಿಂದ ಸುಳ್ಳು ಫಿರ್ಯಾದು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸರ್ಕಾರಿ ಕರ್ತವ್ಯದ ಮೇಲೆ ಇರುವುದರಿಂದ ಬೆಳಿಗ್ಗೆ **10** ರಿಂದ ಸಂಜೆ

5 ಗಂಟೆವರೆಗೂ ಸರ್ಕಾರಿ ಕಛೇರಿಯಲ್ಲೇ ಇರುವ ಕಾರಣ ನಿಮ್ಮನ್ನು ಭೇಟಿಯಾಗುವ ಪ್ರಮೇಯವೇ ಇರುವುದಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಆ ದಿನ ಬಂದು ನನ್ನನ್ನು ಭೇಟಿ ಮಾಡಿದ್ದರು ಎಂದು. 5 ಗಂಟೆವರೆಗೂ ಸರ್ಕಾರಿ ಕಛೇರಿಯಲ್ಲಿರುವ ಕಾರಣ ಅರಕಲಗೂಡಿನಿಂದ 40 ಕಿ.ಮೀ. ದಾಟಿ ಆರೋಪಿ ಬರುವ ಸಾಧ್ಯತೆಯೇ ಇಲ್ಲ ಎಂದು ಸೂಚಿಸಲು ಸಾಕ್ಷಿ ಬಂದಿದ್ದರು ಎಂದು ಹೇಳುತ್ತಾರೆ. ಆರೋಪಿ ಮತ್ತು ಆತನ ಹೆಂಡತಿ ಇಬ್ಬರೂ ಸರ್ಕಾರಿ ಸೇವೆಯಲ್ಲಿರುವ ಕಾರಣ ನಿಮ್ಮ ಬಳಿ ಹಣ ಕೇಳುವ ದರದ್ದೇ ಅವರಿಗಿಲ್ಲ ಎದು ಸೂಚಿಸಲು ಸಾಕ್ಷಿ ಸರಿಯಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.